ಮೇಲೆ ಮಾಡ್ರಿ ಹಾಂ ಹಂಗೆ. ಈಗ ಕೆಳಗೆ ಬಿಡ್ರಿ. ಮುಂಗೈ ಸಡಿಲಬಿಡ್ರಿ" ಹೀಗೆ ಹೆಜ್ಜೆ ಹೆಜ್ಜೆಗೆ ಸೂಚನೆ ಕೊಡುತ್ತಾ ಮೃದುವಾಗಿ ತಲೆಯ ಮೇಲಿಂದ ಹಾಯಿಸಿ ಶರಟು ತೆಗೆದ. ಅವರು ತಲೆ ಕೆಳಗೆ ಹಾಕ್ಕೊಂಡು ತಪ್ಪಿತಸ್ಥ ಹುಡುಗನಂತೆ ಕೂತುಬಿಟ್ಟರು. ಅವರಿಗೆ ಬೆನ್ನಾಗಿ ನಿಂತು ಬಿಸಿ ನೀರಿಗೆ ತಣ್ಣೀರು ಹಾಕಿ ಹದ ಮಾಡುವಾಗ ಹಠತ್ತಾಗಿ ಕತ್ತಿನ ಮೇಲಾಡಿದ ಉರುಟುರುಟು ಬೆರಳುಗಳ ಸ್ಪರ್ಶಕ್ಕೆ ರಮೇಶನಿಗೆ ಮೈ ಜುಮ್ ಅಂದಿತು.

"ಇದ್ಯಾವಾಗಾದದ್ದೋ ರಮೇಶಾ?" ಕುತ್ತಿಗೆಯ ಹಿಂಭಾಗದ ಕಚ್ಚಿನ ಮೇಲೆ ತೋರುಬೆರಳಾಡಿಸಿ ಕೇಳಿದರು.

ಇವ ಥಟ್ಟನೆ ಅವರತ್ತ ತೀಕ್ಷ್ಣವಾಗಿ ನೋಡಿದ.

"ಸಣ್ಣವಿದ್ದಾಗಿನದ್ದೆಂದು ಕಾಣತದ ಕಲೆ ಹಳೆಯದದೆ" ಮತ್ತೆ ಅವರೇ ಹೇಳಿದರು.

"ಯಾಕ ನೆನಪಿಲ್ಲೇನು?" ಸೋಪು ಟವಲು ಹೊಂದಿಸಿಕೊಳ್ಳುತ್ತಾ ಸಹಜವಾಗೇ ಕೇಳಲು ಪ್ರಯತ್ನ ಪಟ್ಟರೂ ರಮೇಶನ ಧ್ವನಿ ನಡುಗಿತು. 'ಇಲ್ಲ' ಅಂತ ಅಡ್ಡಡ್ಡ ತಲೆಯಾಡಿಸಿದವರು ಆಗತಾನೇ ಸೊಂಪು ನಿದ್ದೆ ಮಾಡಿ ಎದ್ದ ಸ್ವಚ್ಛ ಕಣ್ಬೆಳಕಿನ ಮಗುವಿನಂತೆ ಕಂಡಾಗ ಸಖೇದಾಶ್ಚರ್ಯವಾಯ್ತು. 'ಖರೇನ ಎಲ್ಲಾ ಮರೆತಿದ್ದಾರೆಯೆ? ಡಿಮೆನ್ಶಿಯಾ ಏನಾದ್ರೂ ಶುರುವಾತೋ ಹೆಂಗ?' ರಮೇಶ ತುಸು ಗಾಬರಿಯಾದ.

ಕುತ್ತಿಗೆಯ ಗಾಯ ಹೋಗಲಿ ಇವರ ಖುಷಿಗೆಂದು ತಾ ಮನೆಯಲ್ಲಿದ್ದ ಹಳೆಯ ಚರಕದಲ್ಲಿ ದಿನಾ ಗಂಟೆಗಟ್ಟಲೆ ನೂತು ಇಲಿ ಬಾಲದಷ್ಟಾಗುತ್ತಿದ್ದ ದಾರದ ಸುರುಳಿಯನ್ನು ಗೂಟಕ್ಕೆ ಹಾಕಿದರೆ, ಮಧ್ಯಾಹ್ನ ಊಟಕ್ಕೆ ಬಂದವರು ತಾವು ದೊಡ್ಡ ದಾರದ ಸುರುಳಿಯನ್ನು ಅದೇ ಗೂಟದ ಮೇಲೆ ಎದ್ದು ಕಾಣುವಂತೆ ಹಾಕಿ, 'ನಾ ಕೆಲಸಾ ಮಾಡಕೋತ ಇಷ್ಟು ನೂತೇನಿ. ದನಾ ಕಾಯವ್ನೇ ಮನ್ಯಾಗ ಅವ್ವನ ಸೆರಗ್ಹಿಡಕೊಂಡು ಕೂತು ನೀ ನೂತದ್ದು ನೋಡು' ಅಂತ ನಿತ್ಯ ಹಂಗಿಸಿಯೇ ಥಾಲಿಯ ಮುಂದೆ ಕೂಡುತ್ತಿದುದು, ಆಮೇಲೆ ಒಂದಿನ ಖಾದಿ ಗ್ರಾಮೋದ್ಯೋಗದ ಸೇಲ್ಸ್ ಮ್ಯಾನ್, "ನಿಮ್ಮಪ್ಪ ಇವತ್ತು ಒಯ್ಯಲಿಕ್ಕೆ ಮರತಾರೆ ಅವರಿಗೆ ಕೊಡು" ಅಂತ ತನ್ನ ಕೈಗೇ ಅಂಗಡಿಯಲ್ಲಿದ್ದ ದೊಡ್ಡ ದಾರದುಂಡೆ ಕೊಟ್ಟಿದ್ದೂ, ತಾ ಕೋಪದಿಂದ ನಡುಗುತ್ತ ಮನೆಗೆ ಬಂದು, "ನೀವು ನೂಲದೇನೇ ರೆಡಿಮೇಡ್ ದಾರ ಕೊಂಡು ತಂದು ವರ್ಷಗಟ್ಟಳೆ ಖೊಟ್ಟಿ ಮಾತಾಡಿದ್ರಿ, ನನ್ನ ಇಂಜಿನಿಯರಿಂಗ್ ಸೀಟಿನ ಪ್ರಶ್ನೆ ಬಂದಾಗ ಮಾತ್ರ ನಿಮಗೆ ತತ್ವ, ಆದರ್ಶ ಎಲ್ಲ ನೆನಪಿಗೆ ಬಂದವು. ಇವತ್ತಿನಿಂದ ನಿಮ್ಮ ಟೊಳ್ಳು ಆದರ್ಶದಾಗ ನನ್ನ ವಿಶ್ವಾಸ ಹೋತು. ಅಷ್ಟs ಯಾಕ? ನಿಮ್ಮ ಮ್ಯಾಲನೇ ನನಗೆ ವಿಶ್ವಾಸ ಹೋತು." ಅಂತೆಲ್ಲ ಒದರಾಡಿದ್ದು, ಸಿಟ್ಟಿನಿಂದ ಕೂಗಾಡುವಾಗ ಆಸಕ್ತಿಯಿಂದ ತನ್ನನ್ನೇ ದಿಟ್ಟಿಸುತ್ತಿದ್ದ ಅಪ್ಪ ತನ್ನ ಧ್ವನಿ ಅಳುಬುರುಕಾಗತೊಡಗಿದಂತೆ, "ಏನೋ ಮಗನೇ ಯಾರ ಕೂಡಾ ಮಾತಾಡ್ಲಿಕತ್ತೀ ಅಂತ ಮೈಮ್ಯಾಲ ಜ್ಞಾನ ಅದನೋ ಇಲ್ಲೋ" ಅಂತ ಹೆಜ್ಜೆ ಕುಟ್ಟುತ್ತಾ ನಡೆದು ಹೋಗಿದ್ದು, ಯಾವುದೋ ದೊಡ್ಡ ಮೋಸಕ್ಕೆ ಗುರಿಯಾದಂತೆ ತಾ ದಿನದಿಂದ ದಿನಕ್ಕೆ ಸೊರಗಿಹೋಗಿದ್ದು ಯಾವುದೂ ನೆನಪಿಲ್ಲವೆ?'

"ಅಯ್ಯೋ ಥೋಡೆ ಸಾವಕಾಶೋ ರಮೇಶಾ" ನೋವಿನಿಂದ ಅಪ್ಪ ಅರಚಿದಾಗ ಶುದ್ಧಿಗೆ ಬಂದಿದ್ದ. ತಪ್ಪಿ ಅವರ ಮುಂಗೈಗೆ ಬಡಿದ ತಂಬಿಗೆಯನ್ನು ಎತ್ತಿ ಕಟ್ಟೆಯ ಮೇಲಿರಿಸಿ ನೋವಿಗೆ ಬೆವತ ಹಣೆಯ ತುಂಬಾ ತೊಪ್ಪಲಂತೆ ಅಂಟಿಕೊಂಡ ಅವರ ಬಿಳಿಯ ಮುಂಗೂದಲನ್ನು ಸರಿಸಿ ಮುಖ, ಗಲ್ಲ, ಕುತ್ತಿಗೆಯನ್ನೆಲ್ಲಾ ಮೆಲ್ಲಗೆ ಟವಲಿನಿಂದ ಒತ್ತಿ ಒರೆಸಿದ. ಮರುಗಳಿಗೆ ಅವನ ಬೆನ್ನಹುರಿಗುಂಟ ತಣ್ಣಗೆ ಏನೋ ಹರಿದಾಡಿದಂತಾಗಿ ಕೊಸರಾಡಿದ; ಟವಲಿನಲ್ಲೇನಾದರೂ ಚೇಳು ಕಂಡಿತೋ ಎಂಬಂತೆ ಅದನ್ನು ಬೀಸಿ ದೂರಕ್ಕೆಸೆದ. ರಾಮರಾಯರು ಬೆಪ್ಪಾಗಿ ನೋಡುತ್ತಲೇ ಇದ್ದರು; ಇವ, "ನಳಿನಿ,